JANUARY 29, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ, ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆ ಹೆಚ್ಚಿಸಿ, ವೇಗವರ್ಧಿಸುವ, ಕೇಂದ್ರ ವಲಯ ಯೋಜನೆಯಡಿ, ಕಲಬುರಗಿ ಜಿಲ್ಲೆಯ ಕೈಗಾರಿಕಾ ಕೇಂದ್ರ, ಎಂ.ಎಸ್.ಎಂ.ಇ. ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ ಸಭಾಂಗಣದಲ್ಲಿ, ಪರಿಸರ ಮತ್ತು ಸಾಮಾಜಿಕ ನಿರ್ವಹಣೆ ಜಾಗೃತಿ ಕಾರ್ಯಾಗಾರ ಆಯೋಜಿಸಿತ್ತು. ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಆರಂಭಿಸಿರುವ, 120 ಮಹಿಳಾ ನವೋದ್ಯಮಿಗಳು ಪಾಲ್ಗೊಂಡಿದ್ದ, ತರಬೇತಿ ಕಾರ್ಯಾಗಾರಕ್ಕೆ, ಜಿಲ್ಲಾ ಪಂಚಾಯಿತಿ ಸಿಇ.ಓ. ಭಂವರ್‌ಸಿಂಗ್ ಮೀನಾ ಚಾಲನೆ ನೀಡಿದರು. ಕಲ್ಯಾಣ ಕರ್ನಾಟಕ ಭಾಗದ, ನೊಂದಾಯಿತ ಎಂ.ಎಸ್.ಎಂ.ಇ. ಮಹಿಳಾ ಉದ್ದಿಮೆದಾರರು, ಹೊಸ ಕಲ್ಪನೆ, ಸೃಜನಶೀಲತೆಯಿಂದ, ನವೋದ್ಯಮ ಪ್ರಾರಂಭಿಸಿ, ಪರಿಸರ ಮತ್ತು ಸಾಮಾಜಿಕ ನಿರ್ವಹಣೆ ಬಗ್ಗೆ ಕಾಳಜಿ ವಹಿಸಿ; ವಿಶ್ವ ಬ್ಯಾಂಕ್ ಬೆಂಬಲಿತ, ಕೇಂದ್ರ ವಲಯ ಯೋಜನೆಯಡಿ, ಹಣಕಾಸು ಸಹಾಯ ಪಡೆದು, ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ, ಕೋರಿದರು.

<><><>

ಕೇಂದ್ರ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ – ಎಂ.ಎಸ್.ಎಂ.ಇ. ಗಳ ಬಗ್ಗೆ, ಮಹಿಳಾ ನವೋದ್ಯಮಿಗಳಿಗೆ ಅರಿವು ಮೂಡಿಸುವ ಕಾರ್ಯಾಗಾರ, ನಾಳೆ ಬೆಳಗ್ಗೆ 10.30ಕ್ಕೆ ಶಿವಮೊಗ್ಗದ, ಜಿಲ್ಲಾ ಕೈಗಾರಿಕಾ ಕೇಂದ್ರದ ಸಭಾಂಗಣದಲ್ಲಿ, ಜರುಗಲಿದೆ. ಎಂ.ಎಸ್.ಎಂ.ಇ.ಗಳ, ಕಾರ್ಯಕ್ಷಮತೆ ಹೆಚ್ಚಿಸಿ, ವೇಗವರ್ಧಿಸುವ, ವಿಶ್ವ ಬ್ಯಾಂಕ್ ಪ್ರಾಯೋಜಕತ್ವದ, ಕೇಂದ್ರ ವಲಯ ಯೋಜನೆಯಡಿ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ, ಅವೇಕ್, ಈ ಕಾರ್ಯಾಗಾರ ಸಂಘಟಿಸಿವೆ.

<><><>

ವಿಕಸಿತ ಭಾರತ; ಉದ್ಯೋಗ ಮತ್ತು ಜೀವನೋಪಾಯ ಖಾತ್ರಿ ಮಿ ʼನ್, ಗ್ರಾಮೀಣ; ವಿ.ಬಿ., ಜಿ ರಾಮ್ ಜಿ ಕಾಯ್ದೆ, 2025, ಖಾತ್ರಿ ವೇತನ ಸಹಿತ 125 ದಿನಗಳ ಉದ್ಯೋಗ ಒದಗಿಸುತ್ತದೆ ಎಂದು, ಪ್ರೆಸ್ ಇನ್‌ಫಾರ್ಮೇಷನ್ ಬ್ಯುರೋ, ತಿಳಿಸಿದೆ. ನಿರುದ್ಯೋಗ ಭತ್ಯೆಗೆ, ಬಲವಾದ ನಿಬಂಧನೆ, ಸಕಾಲಿಕ ವೇತನ ಪಾವತಿ ಮತ್ತು ವಿಳಂಬಕ್ಕೆ ಪರಿಹಾರ, ಗ್ರಾಮ ಸಭೆಯ ಮೂಲಕ, ವಿಕಸಿತ ಗ್ರಾಮ ಪಂಚಾಯಿತಿ ಯೋಜನೆ ಅನುಷ್ಟಾನ, ಗ್ಯಾರಂಟಿ ಫಾರ್ ರೋಜಗಾರ್ & ಆಜೀವಿಕಾ ಮಿಷನ್ – ವಿ.ಜಿ.ಪಿ.ಪಿ. ಅಡಿ, ಎಲ್ಲ ಯೋಜನೆಗಳ ಸಂಯೋಜನೆ ಹಾಗೂ ತಂತ್ರಜ್ಞಾನದ ಮೂಲಕ ಸಬಲೀಕರಣವನ್ನು, ಕೇಂದ್ರ ಖಾತ್ರಿ ಪಡಿಸಲಿದೆ, ಎಂದು ಪಿ.ಐ.ಬಿ. ಹೇಳಿದೆ.

<><><>

ರಾಜ್ಯ ಕಂದಾಯ ಇಲಾಖೆ, ಕಾಗದ ರಹಿತ ನೋಂದಣಿ ವ್ಯವಸ್ಥೆ ಜಾರಿಗೊಳಿಸಲು, ಯೋಜಿಸಿದೆ. ಈ ನಿಟ್ಟಿನಲ್ಲಿ, ಉಡುಪಿ ಜಿಲ್ಲೆಯ, ಎಲ್ಲ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ, *ಪೇಪರ್ ಲೆಸ್ ರಿಜಿಸ್ಟ್ರೇ ನ್ ಪ್ರೊಸೆಸ್* ಕುರಿತ, ತರಬೇತಿಯನ್ನು ಆಯೋಜಿಸಲಾಗಿದೆ. ಇಂದು ಮಧ್ಯಾಹ್ನ 12 ಗಂಟೆಗೆ ಬೈಂದೂರು ಹಾಗೂ ಸಂಜೆ 4 ರಿಂದ, ಕುಂದಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ, ತರಬೇತಿ ಕಾರ್ಯಾಗಾರ ಜರುಗಲಿದೆ. ದಸ್ತಾವೇಜು ಬರೆಹಗಾರರು, ನ್ಯಾಯವಾದಿಗಳು, ಕರ್ನಾಟಕ ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರಗಳ ಸಿಬ್ಬಂದಿ ಹಾಗೂ ಪೇಪರ್‌ಲೆಸ್ ರಿಜಿಸ್ಟ್ರೇ ನ್ ವ್ಯವಸ್ಥೆ ತಿಳಿಯ ಬಯಸುವ, ಸಾರ್ವಜನಿಕರು ಸಹ, ತರಬೇತಿಯಲ್ಲಿ ಭಾಗವಹಿಸಬಹುದು.

<><><>

ವಿಜಯನಗರ ಜಿಲ್ಲೆ, ಅಂಕಸಮುದ್ರ ಹಾಗೂ ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿ, ಅಪರೂಪದ, ಚಳಿಗಾಲದ ಅನೇಕ ವಲಸೆ ಹಕ್ಕಿಗಳು, ಈಗ ಕಾಣಿಸಿಕೊಂಡು, ಪಕ್ಷಿ ಪ್ರಿಯರನ್ನು ವೀಕ್ಷಣೆಗೆ ಮತ್ತು ಗಣತಿಗೆ ಆಹ್ವಾನಿಸುತ್ತಿವೆ. ಐತಿಹಾಸಿಕ ಹಂಪಿಯ, ಯುನೆಸ್ಕೋ ವಿಶ್ವ ಪಾರಂಪರಿಕ ತಾಣದಲ್ಲಿ, ಅಪರೂಪದ ಬ್ರೌನ್ ರಾಕ್ ಚಾಟ್ – ಕಂದು ಬಣ್ಣದ ಬಂಡೆ ಶಿಳ್ಳಾರ ಪಕ್ಷಿ ಪ್ರಥಮ ಬಾರಿಗೆ ದಾಖಲಿಸಲಾಗಿದೆ. ಪಕ್ಷಿ ಮಿತ್ರ ಪಂಪಯ್ಯಸ್ವಾಮಿ ಮಳೇಮಠ, ಅಪರೂಪದ ಹಕ್ಕಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಪಂಪಯ್ಯಸ್ವಾಮಿ ಮಳೇಮಠ ಧ್ವನಿ 35 ಸೆಕೆಂದುಗಳು

<><><>

ಧಾರವಾಡದ, ಕರ್ನಾಟಕ ವಿಶ್ವವಿದ್ಯಾಲಯದ, ಉನ್ನತ ಭಾರತ ಅಭಿಯಾನ ಕೋಶದ, ಪ್ರಾದೇಶಿಕ ಕೇಂದ್ರ ಹಾಗೂ ದಿ ಇಕೋ ಫ್ಯಾಕ್ಟರಿ ಫೌಂಡೇಶನ್, ಸಹಯೋಗದಲ್ಲಿ, ಮೂರು ದಿನಗಳ, ಪರಿಸರ ಸ್ನೇಹಿ "ಶಾಶ್ವತ ಭಾರತ ಸೇತು ಪ್ರದರ್ಶನ" ಜರುಗಿತು.

ದಿನ ಬಳಕೆಯಲ್ಲಿ ಉತ್ಪನ್ನವಾಗುವ, ಕಚ್ಚಾ ವಸ್ತುಗಳನ್ನು ಮರು ಬಳಕೆ ಮಾಡಿ, ತಯಾರಿಸಲಾದ ಹಲವಾರು ವಸ್ತುಗಳನ್ನು, ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರಿತ್ಯಕ್ಕೆ ಕಾರಣವಾದ, ವಿವಿಧ ಕ್ಷೇತ್ರಗಳ, ಇಂಗಾಲ ಹೊರಸೂಸುವಿಕೆ ಹೆಜ್ಜೆ ಗುರುತುಗಳ ಬಗ್ಗೆ, ಚಿತ್ರ ಸಹಿತ ವಿವರಣೆಗಳು, ಪ್ರದರ್ಶಿನಿಯಲ್ಲಿ ಗಮನ ಸೆಳೆದವು.

<><><>

ಧಾರವಾಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಗ್ರಾಮೀಣ ಹಾಗೂ ನಗರ ಪುನರ್ವಸತಿ ಕಾರ್ಯಕರ್ತರಿಗೆ, ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣೆ ಕುರಿತು, ಒಂದು ದಿನದ ತರಬೇತಿ ಕಾರ್ಯಾಗಾರ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಜರುಗಿತು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಶೇಖರಗೌಡ ರಾಮತ್ನಾಳ ಮಾತನಾಡಿ, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ, 18 ವ ದ ಒಳಗಿನ ಮಕ್ಕಳು, ಶಾಲೆಯಿಂದ ಹೊರಗುಳಿಯದಂತೆ ಕ್ರಮವಹಿಸಬೇಕು. ಯು.ಡಿ.ಐ.ಡಿ. ಗುರುತಿನ ಚೀಟಿ ಮೂಲಕ, ಅವಶ್ಯಕತೆ ಇರುವ ಮಕ್ಕಳಿಗೆ ಚಿಕಿತ್ಸೆ, ಬುದ್ಧಿಮಾಂದ್ಯ ಹಾಗೂ ವಿಶೇಷಚೇತನ ಮಕ್ಕಳಿಗೆ, ವಿಶೇಷ ಆರೈಕೆ ಮತ್ತು ಕಾಳಜಿ ಖಾತ್ರಿ ಪಡಿಸುವಂತೆ, ಸೂಚಿಸಿದರು.

<><><>

ಕರ್ನಾಟಕ ವಿಡಿಯೋ ಮತ್ತು ಫೋಟೋಗ್ರಾಫರ್ಸ್ ಅಸೋಸಿಯೇ ನ್ ಹಾಗೂ ಹುಬ್ಬಳ್ಳಿ ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇ ನ್, ಈ ತಿಂಗಳ 31 ಹಾಗೂ ಫೆಬ್ರುವರಿ 1ನೇ ತಾರೀಖು, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ವಾಸವಿ ಮಹಲ್‌ನಲ್ಲಿ,

11ನೇ ಆವೃತ್ತಿಯ, 'ಡಿ.ಜಿ. ಫೋಟೋ ಎಕ್ಸ್‌ಪೋ – 2026' ಆಯೋಜಿತವಾಗಿದೆ. ಹುಬ್ಬಳ್ಳಿ ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇ ‍ನ್ ಅಧ್ಯಕ್ಷ, ಕಿರಣ ಬಾಕಳೆ ಮಾಹಿತಿ ನೀಡಿ, ನೈಋತ್ಯ ರೇಲ್ವೆ ಮಹಾ ಪ್ರಬಂಧಕ, ಮುಕುಲ್ ಸರಣ್ ಮಾಥುರ್, ಹೊಸೂರು ವಾರ್ಡ್ ಪಾಲಿಕೆ ಸದಸ್ಯ ಚೇತನ ಹಿರೇಕೆರೂರ ಹಾಗೂ ಸಾಮಾಜಿಕ ಕಾರ್ಯಕರ್ತ ವೆಂಕಟೇಶ ಕಾಟವೆ, ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಿದ್ದಾರೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.